(11)ಕರ್ನಾಟಕದ ಮಾಜಿ ಮಹಾರಾಜರಿಗೆ ಸೇರಿದ ಅರಮನೆಗಳ ಮತ್ತು ಇತರಆಸ್ತಿಗಳ ಬಗ್ಗೆ

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ಮಾಜಿ ರಾಜರಿಗೆ ಸೇರಿದ್ದ ಅಥವಾ ಸೇರಿರುವ ಅರಮನೆ ಕರ್ನಾಟಕದಲ್ಲಿ ಬಹಳ ಪ್ರಮುಖವಾದ ಪ್ರವಾಸಿ ಕೇಂದ್ರ. ಇದು ಯಾರ ಸ್ವತ್ತು ? ಇದನ್ನು ಸರ್ಕಾರದವರು ಏನಾದರೂ ಸ್ವಾಧೀನಪಡಿಸಿಕೊಂಡಿದ್ದಾರೆಯೇ ? ಸ್ವಾಧೀನಪಡಿಸಿಕೊಳ್ಳಲಿದೆಯೇ ? ಎಂಬುದು ಸ್ಪಷ್ಟವಿಲ್ಲ. ಶ್ರೀಯುತ ಶ್ರೀಕಂಠದತ್ತ ರಾಜರವರು ಈ ಅರಮನೆ ತಮಗೆ ಸೇರಿದೆಯೆಂದು ಪತ್ರಿಕಾ ಪ್ರಕಟಣೆ ಕೊಟ್ಟು ಇನ್ನು ಈ ಸಮಸ್ಯೆಯನ್ನು ನಿಗೂಢಗೊಳಿಸಿದರು.

ಈ ನಿಗೂಢತೆಯನ್ನು ಬಯಲು ಮಾಡುವುದು ಅವಶ್ಯ. ಸಮಸ್ಯೆಗಳು ಸ್ಪಷ್ಟತೆಗೆ ಅವಕಾಶ ಮಾಡಿ ಕೊಡುವಂತಹ. ಸಮಸ್ಯೆಗಳುದ್ಭವ ಮಾಡುವ ಅವಕಾಶಗಳು ಸೃಷ್ಟಿಯಾಗಿವೆ. ದಿನಪತ್ರಿಕೆಗಳು ದಿನಂಪ್ರತಿ ಈ ಅಪ್ಪಪ್ರಕಾರಗಳನ್ನು ಬಯಲಿಗೆ ಎಳೆದು ಅನೇಕ ಸಮಸ್ಯೆಗಳನ್ನು ಸೃಷ್ಟಿಸಿರುವಂತೆ ಈ ಒಂದು ಸಮಸ್ಯೆಯು ಜಟಿಲತೆಯನ್ನು ತಪ್ಪಿಸಬಹುದು. ಇದು ಅವಶ್ಯಕವಾದುದು. ಈ ಬಗ್ಗೆ ನಿಶ್ಚಿತ ನಿಲುವು ತಿಳಿಯುವುದು ಅವಶ್ಯಕವಾದುದರಿಂದ ಈ ಜರೂರು ಸಾರ್ವಜನಿಕ ಮಹತ್ವದ ಸಮಸ್ಯೆಯ ಬಗ್ಗೆ ಸದನದ ಗಮನವನ್ನು ಸೆಳೆಯುಲು ಅನುಮತಿ ಕೋರುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಇದರಲ್ಲಿ ಅರಮನೆ ಎಂದು ಹೇಳಿದ್ದಾರೆ, ಅದು ಮೈಸೂರು ಅರಮನೆಯೋ, ಬೆಂಗಳೂರು ಅರಮನೆಯೋ, ಇದರಲ್ಲಿ ಸ್ಪಷ್ಟ ಇಲ್ಲ. ಈ ಅರಮನೆಗಳ ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಉತ್ತರ ಕೊಡುವುದಕ್ಕೆ ಪ್ರಯತ್ನಪಡುತ್ತೇನೆ.

ವಿತ್ತೀಯ ಕಲಾಪಗಳು

ಅಭಿಯಾಚನಾ ಕ್ರಮಾಂಕ, 1. 1985-86 ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

ಭೂಸಾರ ಮತ್ತು ಜಲರಕ್ಷಣೆ ವ್ಯವಸಾಯ (ತೋಟಗಾರಿಕೆಯ ಮತ್ತು ಬರಗಾಲಕ್ಕೆ ಗುರಿಯಾದ ಪ್ರದೇಶಗಳ ಯೋಜನೆ ಹೊರತು)

ಶ್ರೀ ಎಂ. ಪಿ. ಪ್ರಕಾಶ್ (ವ್ಯವಸಾಯ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂಸಾರ ಮತ್ತು ಜಲರಕ್ಷಣೆ ವ್ಯವಸಾಯಕ್ಕೆ (ತೋಟಗಾರಿಕೆ ಮತ್ತು ಬರಗಾಲಕ್ಕೆ ಗುರಿಯಾದ ಪ್ರದೇಶಗಳ ಯೋಜನೆ ಹೊರತು) ಸಂದಾಯ ಮಾಡುವಲ್ಲಿ ಬರಬಹುದಾದ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೦,೫೮,೫೮,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೫೫,೩೦,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರ್ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಅಭಿಯಾಚನಾ ಕ್ರಮಾಂಕ, 3— ಪಶುಸಂಗೋಪನೆ ಮತ್ತು ಡೈರಿ ಅಭಿವೃದ್ಧಿ

ಶ್ರೀ ಸಿದ್ದರಾಮಯ್ಯ (ಪಶುಸಂಗೋಪನಾ ಮತ್ತು ಪಶುವೈದ್ಯ ಸೇವೆಗಳ ರಾಜ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ. ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪಶುಸಂಗೋಪನಾ ಮತ್ತು ಡೈರಿ ಅಭಿವೃದ್ಧಿಗಳಿಗೆ ಸಂದಾಯ ಮಾಡುವಲ್ಲಿ ಬರಬಹುದಾದ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೬,೬೫,೫೩,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩,೦೦,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರ್ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.